ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

**"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ**
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ: ಮಾನಿಮಂ/ಆಡಳಿತ/2013-14/ 1969(A) ದಿನಾಂಕ: 31 JUL 2013

**ಕಛೇರಿ ಆದೇಶ**

ವಿಷಯ: ಮಂಡಳಿಯ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ.

ಉಲ್ಲೇಖ: 1. ಮಂಡಳಿಯ ಆದೇಶ ಸಂಖ್ಯೆ: ಮಾನಿಮಂ/ಆಡಳಿತ/2012-13/5207 ದಿನಾಂಕ:25-3-2013
2. ಮಂಡಳಿಯ ಕಛೇರಿ ಆದೇಶ ಸಂಖ್ಯೆ: ಮಾನಿಮ /ಮಾಹಕಾ 2005/2012-13/1770 ದಿನಾಂಕ:20-7-2013
3. ಮಂಡಳಿಯ ಕಛೇರಿ ಆದೇಶ ಸಂಖ್ಯೆ: ಮಾನಿಮ /ಮಾಹಕಾ 2005/2012-13/1771 ದಿನಾಂಕ:20-7-2013

<<<>>>

ಮಂಡಳಿಯ ಕೇಂದ್ರ ಕಛೇರಿಯಲ್ಲಿ ಮಾಹಿತಿ ಹಕ್ಕು ನಿಯಮ 4 (1) (ಬಿ) ಅಡಿಯಲ್ಲಿ ಸ್ವೀಕೃತಗೊಳ್ಳುವ ಅರ್ಜಿಗಳಿಗೆ ಪೂರ್ಣ ಮಾಹಿತಿಯನ್ನು ನಿಗದಿತ ಅವಧಿಯಲ್ಲಿ ಅರ್ಜಿದಾರರಿಗೆ ಒದಗಿಸುವ ಉದ್ದೇಶದಿಂದ ಕೇಂದ್ರ ಕಛೇರಿಯ ಮುಖ್ಯ ಪರಿಸರ ಅಧಿಕಾರಿ ಮತ್ತು ಹಿರಿಯ ಪರಿಸರ ಅಧಿಕಾರಿಗಳನ್ನು ಉಲ್ಲೇಖ (1)ರ ಆದೇಶದ ಅನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಉಲ್ಲೇಖ (2) ರ ಅನ್ವಯ ಮಂಡಳಿಯಲ್ಲಿ ಸದಸ್ಯ ಕಾರ್ಯದರ್ಶಿ ಹುದ್ದೆಯಲ್ಲಿದ್ದ ಶ್ರೀ ಹೆಚ್.ಪಿ.ಪ್ರಕಾಶ್, ಐ.ಎಫ್.ಎಸ್. ಇವರು ವರ್ಗಾವಣೆಗೊಂಡ ಕಾರಣ ಶ್ರೀ ಡಿ.ಆರ್.ಕುಮಾರಸ್ವಾಮಿ, ಮುಖ್ಯ ಪರಿಸರ ಅಧಿಕಾರಿ ಇವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಸದಸ್ಯ ಕಾರ್ಯದರ್ಶಿ ಹುದ್ದೆಯ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ. ಅದರಂತೆಯೇ ಉಲ್ಲೇಖ (3) ರಲ್ಲಿ ಮಂಡಳಿಯ ಕೇಂದ್ರ ಕಛೇರಿ ಮತ್ತ ಕೇಂದ್ರ ಪರಿಸರ ಪ್ರಯೋಗಾಲಯಕ್ಕೆ ಸಂಬಂಧಿಸಿದಂತೆ ಸದಸ್ಯ ಕಾರ್ಯದರ್ಶಿ ಹುದ್ದೆಯ ಪ್ರಭಾರದಲ್ಲಿರುವ ಶ್ರೀ ಡಿ.ಆರ್.ಕುಮಾರಸ್ವಾಮಿ, ಇವರನ್ನು ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 19 (1) ರಡಿಯಲ್ಲಿ ಮೊದಲನೇ ಮೇಲ್ಮನವಿ ಪ್ರಾಧಿಕಾರವನ್ನಾಗಿ ನೇಮಕಾತಿ ಮಾಡಲಾಗಿರುತ್ತದೆ.

ಇದರಿಂದಾಗಿ ಉಲ್ಲೇಖ (1) ರ ಆದೇಶವನ್ನು ಭಾಗಶ: ಮಾರ್ಪಡಿಸಿ ಈ ಕೆಳಕಂಡಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಲಾಗಿದೆ.

...2

| ಕ್ರಮ ಸಂಖ್ಯೆ | ವಿಭಾಗಗಳು | ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1 | ಅಧ್ಯಕ್ಷರ ವಿಭಾಗ, ಸದಸ್ಯ ಕಾರ್ಯದರ್ಶಿಗಳ ವಿಭಾಗ, ಆಡಳಿತ ವಿಭಾಗ, ಸಾರ್ವಜನಿಕ ಸಂಪರ್ಕಾಧಿಕಾರಿ ವಿಭಾಗ, ಕಾನೂನು ವಿಭಾಗ, ಹಣಕಾಸು ವಿಭಾಗ | ಮುಖ್ಯ ಆಡಳಿತಾಧಿಕಾರಿ/ಸಾರ್ವಜನಿಕ ಸಂಪರ್ಕ ಅಧಿಕಾರಿ | ಸಾರ್ವಜನಿಕ ಸಂಪರ್ಕ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| 2 | ನಿಗಮಿತ ಕೋಶ ಮತ್ತು ಜಾರಿ ಕೋಶ/ದೂರು ಕೋಶ | ಮುಖ್ಯ ಪರಿಸರ ಅಧಿಕಾರಿ-1 | ಹಿರಿಯ ಪರಿಸರ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| 3 | 17ನೇ ಪ್ರವರ್ಗ ಶಾಖೆ, ಇ-ಆಡಳಿತ, AAQM ವಿಭಾಗ | ಮುಖ್ಯ ಪರಿಸರ ಅಧಿಕಾರಿ-1 | ಹಿರಿಯ ಪರಿಸರ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| 4 | ಅಪಾಯಕಾರಿ ತ್ಯಾಜ್ಯ ನಿರ್ವಹಣಾ ಶಾಖೆ, ಆಸ್ಪತ್ರೆ ತ್ಯಾಜ್ಯ ನಿರ್ವಹಣಾ ಕೋಶ | ಮುಖ್ಯ ಪರಿಸರ ಅಧಿಕಾರಿ-1 | ಹಿರಿಯ ಪರಿಸರ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| 5 | ಗಣಿ ಶಾಖೆ, ಮೂಲಭೂತ ಸೌಕರ್ಯ ಶಾಖೆ, ಕಟ್ಟಡ ವಿಭಾಗ | ಮುಖ್ಯ ಪರಿಸರ ಅಧಿಕಾರಿ-1 | ಹಿರಿಯ ಪರಿಸರ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಮೇಲ್ಕಂಡಂತೆ ನೇಮಿಸಲಾಗಿರುವ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅವರವರ ವಿಭಾಗಳಿಗೆ ಸಂಬಂಧಪಟ್ಟಂತೆ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಸ್ವೀಕೃತವಾಗುವ ಅರ್ಜಿಗಳಿಗೆ ತಪ್ಪದೆ ನಿಗದಿತ ಅವಧಿಯಲ್ಲಿ ಸೂಕ್ತ ಮಾಹಿತಿಯನ್ನು ನೀಡಲು ಈ ಮೂಲಕ ಸೂಚಿಸಿದೆ.

ಅಧ್ಯಕ್ಷರು

ಪ್ರತಿಗಳು:

1. ಮಾನ್ಯ ಅಧ್ಯಕ್ಷರ ಮತ್ತು ಸದಸ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ
2. ಮುಖ್ಯ ಪರಿಸರ ಅಧಿಕಾರಿಗಳ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
3. ಹಿರಿಯ ಪರಿಸರ ಅಧಿಕಾರಿಗಳು, ಕೇಂದ್ರ ಕಛೇರಿ ಇವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
4. ಮುಖ್ಯ ಆಡಳಿತಾಧಿಕಾರಿಯವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
5. ಮುಖ್ಯ ಹಣಕಾಸು ಅಧಿಕಾರಿಯವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
6. ಕೇಂದ್ರ ಕಛೇರಿಯ ಎಲ್ಲಾ ವಿಭಾಗದವರ ಮಾಹಿತಿಗಾಗಿ